


■ ಹಿಂದಿ ಮೂಲ: ಶರದ್ ಸಿಂಗ್
■ ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಕಲೆ: ಎಚ್.ಎಸ್. ಮೋನಪ್ಪ

# ಸುಗಂಧಾಗೆ ರಿತಿಕ್ ತಂದೆ ಕಿವಿಮಾತು

ಸುಗಂಧಾ–ರಿತಿಕ್ ಮಾತುಕತೆ ಮುಂದುವರೆಯುತ್ತದೆ. ಆಗ ರಿತಿಕ್ ಇನ್ನೊಂದು ಪ್ರಸಂಗವನ್ನು ಹೇಳಿದ್ದ. ಮುದ್ದಿನಿಂದಾಗಿ ಹಾಳಾದ ಬಗ್ಗೆ ಮತ್ತೊಂದು ಸಾಕ್ಷಿ.

‘ಆ ದಿನಗಳಲ್ಲಿ ನಾನು ನನ್ನ ಸೋದರಮಾವನ ಬಳಿ ದಿಲ್ಲಿಗೆ ಹೋಗಿದ್ದೆ. ಅವರು ನನ್ನನ್ನು ನಗರ ಪಾಲಿಕೆಯ ಬಜಾರನ್ನು ತೋರಿಸಲು ಕರೆದೊಯ್ದರು. ನಾನಲ್ಲಿಗೆ ಮೊದಲ ಬಾರಿಗೆ ಹೋಗಿದ್ದೆ. ನಾನು ಅದಕ್ಕೂ ಮೊದಲು ಅಷ್ಟು ದೊಡ್ಡ ಬಜಾರನ್ನು ನೋಡಿರಲಿಲ್ಲ. ಅಲ್ಲಿ ನೂರಾರು ಅಂಗಡಿಗಳು ಮತ್ತು ರಾಶಿರಾಶಿ ಸಾಮಾನುಗಳಿದ್ದವು, ನನಗೆ ಆಶ್ಚರ್ಯವಾಗಿತ್ತು. ನಾನು ಅನೇಕ ವಸ್ತುಗಳನ್ನು ಪಡೆಯಲು ಬಯಸುತ್ತಿದ್ದೆ. ಸೋದರ ಮಾವ ನನಗೆ ಸಾಕಷ್ಟು ವಸ್ತುಗಳನ್ನು ಖರೀದಿಸಿ ಕೊಟ್ಟರು. ಆದರೂ ನನ್ನ ಮನಸ್ಸಿಗೆ ತೃಪ್ತಿಯಾಗಲಿಲ್ಲ. ನಾನೊಂದು ಟೀ ಶರ್ಟ್‌ನ್ನು ಯಾರಿಗೂ ತಿಳಿಯದಂತೆ ನನ್ನ ಬಟ್ಟೆಗಳ ಒಳಗೆ ಅಡಗಿಸಿಟ್ಟುಕೊಂಡೆ. ಇದನ್ನು ಅಂಗಡಿಯ ನೌಕರ ನೋಡಿದ. ಅವನು ತನ್ನ ಮಾಲೀಕನಿಗೆ ಹೇಳಿದ. ಮಾಲೀಕ ಸೋದರ ಮಾವನಿಗೆ ಹೇಳಿದ. ಮೊದಲು ಸೋದರಮಾವ ಇದನ್ನು ಒಪ್ಪಲಿಲ್ಲ. ನಂತರ ಅವರು ನನ್ನ ಬಟ್ಟೆಗಳನ್ನು ತಡವರಿಸಿ ನೋಡಿದಾಗ ಟೀಶರ್ಟ್ ಅವರ ಕೈಗೆ ಸಿಕ್ಕಿತು. ನಾನು ರೋದಿಸಿದೆ. ಸೋದರಮಾವ ನಾಚುತ್ತಾ ಅಂಗಡಿಯ ಮಾಲೀಕನಲ್ಲಿ ಕ್ಷಮೆ ಯಾಚಿಸಿ, ಟೀ ಶರ್ಟ್ ಹಣವನ್ನು ಕೊಟ್ಟರು. ಅವರು ಮನೆಗೆ ಬಂದು ತಂದೆಯವರಿಗೆ ಫೋನ್ ಮಾಡಿ ವಿಷಯ ತಿಳಿಸಿದರು. ಅಪ್ಪ ನನ್ನನ್ನು ದಂಡಿಸುತ್ತಾರೆ ಎಂದು ತಿಳಿದೆ. ಆದರೆ ಮರುದಿನ ಅವರು ದಿಲ್ಲಿಗೆ ಬಂದು ಸೋದರಮಾವನನ್ನು ಭೇಟಿಯಾಗಿ, ‘ನೀವು ಅವನಿಗೆ ಟೀಶರ್ಟ್ ಖರೀದಿಸಿ ಕೊಡಲಿಲ್ಲವೇನೋ, ಅದಕ್ಕೇ ಅವನು ಹೀಗೆ ಮಾಡಿದ, ಅವನು ಕದಿಯುವಂಥ ಹುಡುಗನಲ್ಲ’ ಎಂದರು. ಹೀಗೆ ನನ್ನ ತಂದೆಯವರು ನನ್ನನ್ನು ಪಾರು ಮಾಡಿದರು. ನಂತರ ಸೋದರ ಮಾವ ಮತ್ತು ತಂದೆಯವರ ಮಧ್ಯೆ ಸದಾ ಲಟಾಪಟಿ ಆರಂಭವಾಯಿತು.’

ರಿತಿಕ್ ಈ ಕಥೆಯನ್ನು ಹೇಳಿ ನನ್ನನ್ನು ಚಕಿತಗೊಳಿಸಿದ್ದ. ತಂದೆಯೊಬ್ಬರು ತಮ್ಮ ಮಗನನ್ನು, ಅವನು ಹಾಳಾಗುವಷ್ಟು ಪ್ರೀತಿಸುವುದು ನನಗೇಕೋ ಹಿಡಿಸಲಿಲ್ಲ. ಈ ಬಗ್ಗೆ ಯೋಚಿಸಲು ನಾನು ವಿವಶಳಾದೆ. ನನಗೆ ಬೇಡವೆಂದರೂ ನನ್ನ ಅಪ್ಪನ ನೆನಪಾಗುತ್ತಿತ್ತು. ಅಮ್ಮನಿಂದ ಪ್ರತ್ಯೇಕಗೊಂಡ ನಂತರ ಅವರು ಒಮ್ಮೆಯೂ ನನ್ನನ್ನು ನೆನಪಿಸಿಕೊಂಡಿರಲಿಲ್ಲ. ತಮ್ಮ ಮಗಳ ಬಗ್ಗೆ ತಿಳಿಯಬೇಕೆಂದು ಒಮ್ಮೆಯೂ ಅವರಿಗೆ ಅನ್ನಿಸಿರಲಿಲ್ಲ. ಅಮ್ಮನಿಂದ ಬೇರೆಯಾಗುವುದಕ್ಕೆ ಮೊದಲೂ ಅವರು ನನ್ನನ್ನು ಪ್ರೀತಿಸಿರಲಿಲ್ಲ. ಅವರನ್ನು ನಾನು ನೆನಪಿಸಿಕೊಂಡು ಒಂದೆರಡು ಕ್ಷಣ ಸಂತಸವನ್ನು ಅನುಭವಿಸಲು ಸಹ ನನಗೆ ಅವಕಾಶವಿರಲಿಲ್ಲ.

ತಂದೆಯ ಮುದ್ದಿನ ಪ್ರಸಂಗಗಳಿಂದ ರಿತಿಕ್‌ನ ಸ್ವಭಾವ ಮತ್ತು ಅವರ ಪರಿವಾರದ ವಾತಾವರಣವನ್ನು ಅರ್ಥ ಮಾಡಿಕೊಂಡೆ; ಆದರೆ ರಿತಿಕ್ ಬಗ್ಗೆ ನನಗಿದ್ದ ಆಸಕ್ತಿಯಲ್ಲಿ ಯಾವುದೇ ಕೊರತೆ ಕಾಣ ಬಂದಿರಲಿಲ್ಲ.

ಅದೊಂದು ದಿನ ರಿತಿಕ್ ನನಗೆ ಫೋನ್ ಮಾಡಿ, ‘ಅಪ್ಪ ಬಂದಿದ್ದಾರೆ, ಅವರು ರಾತ್ರಿ ಮನೆಯಲ್ಲಿಯೇ ಉಳಿಯುತ್ತಾರೆ’ ಎಂದಾಗ ನನಗೆ ಅವರನ್ನು ನೋಡುವ, ಭೇಟಿಯಾಗುವ ಉತ್ಸುಕತೆಯಾಯಿತು. ಅವರು ನಾವಿಬ್ಬರು ಈ ರೀತಿ ಜೊತೆಯಲ್ಲಿರಲು ಸಹಜವಾಗಿಯೇ ಒಪ್ಪಿಗೆಯನ್ನು ಕೊಡುತ್ತಾರೆ ಎಂದು ನನಗೆ ಅನ್ನಿಸಿತು. ಅವರು ರಿತಿಕ್‌ನ ತಪ್ಪು ಕೆಲಸಗಳನ್ನು ಮನಸಾರೆ ಸಮರ್ಥಿಸಿದ್ದರು; ಹೀಗಿರುವಾಗ ನಾವು ಜೊತೆಗಿರುವುದು ತಪ್ಪಾಗಿರಲಿಲ್ಲ. ನಾವಿಬ್ಬರು ವಯಸ್ಕರಾಗಿದ್ದು, ಸ್ವೇಚ್ಛೆಯಿಂದ ಜೊತೆಯಲ್ಲಿರುತ್ತಿದ್ದೆವು. ಆದರೆ ಈ ರೀತಿ ನಾನು ಯೋಚಿಸಿದ್ದು ತಪ್ಪೆಂದು ಸಾಬೀತಾಯಿತು. ಓರ್ವ ಸಂಪ್ರದಾಯಸ್ಥ ತಂದೆಯಂತೆ ಅವರು ಮೊದಲು ರಿತಿಕ್‌ಗೆ, ನಂತರ ನಮ್ಮಿಬ್ಬರಿಗೆ, ಒಂದು ವೇಳೆ ಜೊತೆಗಿರಬೇಕೆಂದರೆ ವಿವಾಹವಾಗಿ ಜೊತೆಗಿರಿ ಎಂದು ತಿಳಿಯಪಡಿಸಿದರು.

ರಾತ್ರಿಯ ಊಟದ ನಂತರ ಅವರು ನಮ್ಮಿಬ್ಬರ ಎದುರು ಬಂದು ಕೂತರು.

‘ನಾನು ನಿಮ್ಮೊಂದಿಗೆ ಕೆಲವು ವಿಷಯಗಳ ಬಗ್ಗೆ ಮಾತನಾಡಲು ಬಯಸುತ್ತೇನೆ’, ರಿತಿಕ್ ತಂದೆ ಹೇಳಿದರು.

‘ಮಧ್ಯಾಹ್ನ ಹೇಳಿದ್ದ ಮಾತನ್ನೇ ಹೇಳಬೇಕೆಂದಿದ್ದರೆ, ಪ್ಲೀಸ್ ಡೋಂಟ್ ಡಿಸ್ಕಸ್ ಎಗೇನ್’ ರಿತಿಕ್ ಗಡಸು ಧ್ವನಿಯಲ್ಲಿ ಹೇಳಿದ.

‘ಮೊದಲು ನನ್ನ ಮಾತು ಕೇಳು, ಆಮೇಲೆ ನೀನು ಹೇಳ ಬೇಕೆಂದಿರುವುದನ್ನು ಹೇಳು’, ರಿತಿಕ್ ತಂದೆ ಸಹ ಗಡಸು ಧ್ವನಿಯಲ್ಲಿ ಹೇಳಿದರು.

‘ಸರಿ, ಹೇಳಿ’

‘ಸುಗಂಧಾ! ನಾನು ಮೊದಲು ನಿನ್ನನ್ನು ಕೇಳ್ತಿದ್ದೀನಿ, ನೀನು ಇದೇನು ಮಾಡ್ತಿದ್ದೀಯ?’

‘ನನಗೆ ಅರ್ಥವಾಗಲಿಲ್ಲ’ ನಾನು ಅವರ ಮಾತನ್ನು ಅರ್ಥ ಮಾಡಿಕೊಂಡಿದ್ದಾಗ್ಯೂ ಹೇಳಿದೆ.

‘ನೋಡು ಸುಗಂಧಾ, ನೀವಿಬ್ಬರು ಮದುವೆಯಾಗದೆ ಹೀಗೆ ಜೊತೆಯಲ್ಲಿರುವುದು ಸರಿಯಲ್ಲ. ಇವನು ಹುಡುಗ, ಆದರೆ ನೀನು ಹುಡುಗಿ, ಇದು ಸರಿಯಲ್ಲ ಅಂತ ನೀನಾದರೂ ಅರ್ಥ ಮಾಡಿಕೊಳ್ಳಬೇಕು.’



